**ಆತ:** ನೋಡು ಪ್ರಿಯೆ, ನಾನು ಒಂದು ವಿಷಯ ಮುಚ್ಚಿಟ್ಟು ನಿನ್ನನ್ನು ಮದುವೆಯಾಗಿದ್ದೇನೆ.
**ಆಕೆ:** ಏನು ವಿಷಯ?
**ಆತ:** ನನಗೆ ಈಗಾಗಲೇ ಮದುವೆಯಾಗಿ, ಒಂದು ಮಗುವಿದೆ!
**ಆಕೆ:** ಇಷ್ಟೇನಾ? ಇದು ನನಗೆ ನಾಲ್ಕನೆಯ ಮದುವೆ!

***

**ಇನ್‌ಸ್ಪೆಕ್ಟರ್:** ಅಲ್ಲಯ್ಯಾ, ಪಕ್ಕದ ಮನೆಯವನ ಹೆಂಡತಿ ಕಾಣೆಯಾಗಿರುವುದಕ್ಕೆ ನೀನೇಕೆ ಕಂಪ್ಲೇಂಟ್ ಕೊಡುವುದಕ್ಕೆ ಬಂದಿದ್ದೀಯೆ?
**ಆತ:** ಅವನು, ಹೆಂಡತಿ ಕಾಣೆಯಾದಂದಿನಿಂದ ಪಾರ್ಟಿ ಮಾಡ್ತಾನೇ ಇದ್ದಾನೆ ಸರ್!

***

**ಪತಿ:** ಪ್ರಿಯೆ, ನಿನಗಾಗಿ ಒಂದು ದೊಡ್ಡ ಬಂಗಲೆ ಕಟ್ಟಲೆ?
**ಪತ್ನಿ:** ಏನೂ ಕಟ್ಟಬೇಡಿ, ಮೊದಲು ಸಾಲದ ಬಡ್ಡಿ ಕಟ್ಟಿ!

***

**ನ್ಯಾಯಾಧೀಶ:** ಏನಮ್ಮಾ, ನಿನ್ನ ಗಂಡನದೇ ತಪ್ಪು ಎನ್ನುವುದಕ್ಕೆ ಏನಾದರೂ ಆಧಾರ ಇದೆಯೆ?
**ಆಕೆ:** ಇದೆ ಸರ್, ಆದರೆ ಆಧಾರದಲ್ಲಿ ನನ್ನ ಫೋಟೊ ಚೆನ್ನಾಗಿ ಬಂದಿಲ್ಲ. ಅದಕ್ಕೆ ಅದನ್ನು ತಂದು ತೋರಿಸುವುದಕ್ಕೆ ಆಗುವುದಿಲ್ಲ!

***

**ಪತ್ನಿ:** ರೀ... ನಾನು ನಿಮ್ಮನ್ನು ಬಿಟ್ಟು ಹೊರಟು ಹೋದರೆ ನೀವೇನು ಮಾಡುತ್ತೀರಿ?
**ಪತಿ:** ಇಲ್ಲಿಂದಲೇ ಕೈಮುಗಿಯುತ್ತೇನೆ.
**ಪತ್ನಿ:** ಏಕೆ?
**ಪತಿ:** ನೀನು ಎಲ್ಲಿಯೇ ಇರು, ಅಲ್ಲಿಯೇ ಸುಖವಾಗಿರು ಅಂತ!

***

**ಶಿಕ್ಷಕ:** ಗುಂಡ, ಹಾರುವ ತಟ್ಟೆಗಳು ಮೊದಲು ಯಾರಿಗೆ ಕಾಣಿಸಿದ್ದು?
**ಗುಂಡ:** ನಮ್ಮ ತಾತನಿಗೆ ಮೊದಲು ಕಂಡಿದ್ದು! ಅಜ್ಜಿಗೆ ಹಬ್ಬಕ್ಕೆ ಸೀರೆ ಕೊಡಿಸದೆ ಹೋದಾಗ ಅಡುಗೆ ಮನೆಯಿಂದ ತಟ್ಟೆಗಳು ಹಾರಿ ಬರುತ್ತಿದ್ದವು ಸರ್!

***

**ಪತ್ನಿ:** ಯಾಕ್ರೀ, ಆಗಾಗ ನನ್ನ ಮುಖದ ಮೇಲೆ ನೀರು ಚಿಮುಕಿಸುತ್ತೀರಿ?
**ಪತಿ:** ಯಾಕೆಂದರೆ, ನಿಮ್ಮನೆಯವರು ಹೂವಿನ ಹಾಗೆ ನೋಡಿಕೊಳ್ಳುವುದಕ್ಕೆ ಹೇಳಿದ್ದಾರೆ!

***

**ಜ್ಯೋತಿಷಿ:** ನಿಮ್ಮ ಜೀವನದಲ್ಲಿ ಬಹಳ ಏರಿಳಿತಗಳಿವೆ.
**ಆತ:** ನೀವು ಹೇಳುವುದು ನಿಜ. ನಾನು ಬಹು ಮಹಡಿ ಕಟ್ಟಡದಲ್ಲಿ ಲಿಫ್ಟ್ ಮ್ಯಾನ್!

***

**ಗುಂಡ:** ರಂಗ, ನಿನ್ನ ಪುಸ್ತಕ ಸಂಗ್ರಹ ಬಹಳ ಅದ್ಭುತವಾಗಿದೆ. ಆದರೆ ಇನ್ನಷ್ಟು ಉತ್ತಮವಾಗಿ ಪುಸ್ತಕಗಳನ್ನು ಜೋಡಿಸಲು ಇನ್ನು ಕೆಲವು ಕಪಾಟುಗಳು ಬೇಕಾಗಿವೆ.
**ರಂಗ:** ನಿಜ ಗುಂಡ, ಆದರೆ ಕಪಾಟುಗಳನ್ನು ಎರವಲು ಕೇಳಲು ಇನ್ನು ಧೈರ್ಯ ಬಂದಿಲ್ಲ!

***










**ಆತ:** ಡಾಕ್ಟರು ಹೇಳಿದಂತೆ ನೀವು ನಡೆಯುವಂತಾದಿರಿ.
**ಈತ:** ಹೌದು, ಅವರು ಬಿಲ್ ಕಟ್ಟುವುದಕ್ಕೆ ನನ್ನ ಕಾರು ಮಾರಿದ್ದಾಯಿತ್ತಲ್ಲ!

***

**ಆಕೆ:** ನಿಮ್ಮವರಿಗೆ ಕಿವಿ ಮಂದವಾಗಿತ್ತಲ್ಲ, ಏನಾದರೂ ಚಿಕಿತ್ಸೆ ಕೊಡಿಸಿದಿರಾ?
**ಈಕೆ:** ಇಲ್ಲ, ಅವರೇ ನಿಧಾನಿಸುತ್ತಿದ್ದಾರೆ, ಪಕ್ಕದ ಮನೆಯ ಸಂಗೀತ ಪಾಠ ಮುಗಿದು ಹೋಗಲಿ ಅಂತ!

***

**ಪರಮೇಶಿ:** ಹರಿ, ನಿಮ್ಮ ನಾಟಕಕ್ಕೆ ಇಲ್ಲಿಂದ ಎಷ್ಟು ಜನ ಹೋಗುತ್ತಾ ಇದ್ದೀರಿ?
**ಹರಿ:** ನಾವು ಸುಮಾರು 70–80 ಮಂದಿ ಹೋಗಬೇಕೆಂದಿರುವೆವು.
**ಪರಮೇಶಿ:** ಹಾಗಾದ್ರೆ, ಪ್ರೇಕ್ಷಕರನ್ನೂ ಇಲ್ಲಿಂದಲೇ ಕರೆದುಕೊಂಡು ಹೋಗುತ್ತೀರಿ ಅಂತ ಆಯ್ತು!

***

**ಕಾವಲುಗಾರ:** ಕ್ಷಮಿಸಿ, ಮೇಡಂ ಈ ಕೊಳದಲ್ಲಿ ಈಜುವುದನ್ನು ನಿಷೇಧಿಸಲಾಗಿದೆ.
**ಆಕೆ:** ನಾನು ಬಟ್ಟೆ ಬದಲಾಯಿಸುವಾಗಲೇ ಏಕೆ ಹೇಳಲಿಲ್ಲ?
**ಕಾವಲುಗಾರ:** ಬಟ್ಟೆ ಬದಲಾಯಿಸುವುದಕ್ಕೆ ಇಲ್ಲೇನೂ ನಿಷೇಧ ಇಲ್ಲ!

***

**ಧನಂಜಯ:** ರಶ್ಮಿ, ನಾನು ನಿನ್ನ ಪ್ರೀತಿಸೋ ವಿಚಾರ ಯಾರ ಹತ್ತಿರನೂ ಹೇಳಬೇಡ.
**ರಶ್ಮಿ:** ನಮ್ಮ ಅಮ್ಮನಿಗೆ ಹೇಳಲೇಬೇಕು.
**ಧನಂಜಯ:** ಏಕೆ?
**ರಶ್ಮಿ:** ಅಮ್ಮ ಯಾವಾಗಲೂ ನಿನ್ನ ಯಾವ ಹುಚ್ಚ ಪ್ರೀತಿಸ್ತಾನೆ ನಾನು ನೋಡ್ತೀನಿ ಅಂತ ಹೇಳ್ತಾ ಇರ್ತಾಳೆ!

***

**ಮೂರ್ತಿ:** ರಂಗ, ಆ ಬೇಟೆಗಾರ ಬಹಳ ಧೈರ್ಯವಂತ, ಸಿಂಹದ ಬಾಲ, ಕಾಲು ಎಲ್ಲ ಕಡಿದುಕೊಂಡು ಬಂದು ತೋರಿಸಿದ!
**ರಂಗ:** ತಲೆ ಕಡಿದುಕೊಂಡು ಬರಲಿಲ್ಲವೆ?
**ಮೂರ್ತಿ:** ತಲೆಯನ್ನು ಮೊದಲೇ ಯಾರೋ ಕಡಿದುಕೊಂಡು ಹೋಗಿದ್ರಂತೆ!

***

**ಪ್ರಿಯಾಂಕ:** ರೀ... ನಿಮಗೆ ರಾಣಿ ಎಂಬ ಮೊದಲನೆ ಹೆಂಡತಿ ಇರೋದನ್ನು ಮದುವೆಗೆ ಮುಂಚೆ ನನಗೇಕೆ ಹೇಳಲಿಲ್ಲ?
**ರವಿ:** ಹೇಳಿದ್ದೆ, ನೀನೆಲ್ಲೋ ಮರೆತಿದ್ದಿಯ.
**ಪ್ರಿಯಾಂಕ:** ಯಾವಾಗ ಹೇಳಿದ್ರಿ?
**ರವಿ:** ಚಿಂತೆಬಿಡು ನಿನ್ನನ್ನು ರಾಣಿಯಾಗಿಯೇ ನೋಡಿಕೊಳ್ತಿನಿ ಅಂತ ಹೇಳಿದ್ದೆ. ಮರೆತ್ಬಿಟ್ಟಾ?

***

**ವೈದ್ಯ:** ಸಿಸ್ಟರ್, ಇವತ್ತು ಆಪರೇಷನ್ ಮಾಡಬೇಕಾಗಿದ್ದ ವ್ಯಕ್ತಿ ಕಾಣ್ತಾ ಇಲ್ಲ?
**ನರ್ಸ್:** ಹೌದು ಸರ್, ಇನ್ನು ನಾಲ್ಕಾರು ವರ್ಷಗಳು ಬದುಕಬೇಕು ಅಂತ ಹೇಳಿ ಹೋದ್ರು!

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ